ಬಿಲ್ಲವ ಜನಾಂಗದವರು ಮುಕ್ತವಾಗಿ ಶೇಂದಿಯನ್ನು ಮಾರಾಟ ಮಾಡುವ ಬಗ್ಗೆ.

೨೯೫. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಅಬಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಬಿಲ್ಲವ ಜನಾಂಗದವರು ತಮ್ಮ ಕುಲ ಕಸುಬಾದ ಮೂರ್ತೆಯನ್ನು ಮಾಡಿಗಳಿಸಿದ ಶೇಂದಿಯನ್ನು ಅವರೇ ಮುಕ್ತವಾಗಿ ಮಾರಾಟ ಮಾಡಲು ಅವಕಾಶ ಕೊಡದಿರಲು ಕಾರಣಗಳೇನು ?

ಆ) ಮೂರ್ತೆದಾರರು ತಾವು ದಿನವಿಡಿ ಕಷ್ಟಪಟ್ಟು ದುಡಿದ ಶೇಂದಿಯನ್ನು ಹರಾಜಿನಲ್ಲಿ ಪಡೆದ ಕಂಟ್ರಾಕ್ಟ್ ದಾರರಿಗೇನೇ ವಿಕ್ರಯಿಸಬೇಕಾದ ಅವಶ್ಯಕತೆಯೇನು ?

ಇ) ಇತರ ಜನಾಂಗದ ಕುಲಕಸುಬುದಾರರಿಗೆ ಈ ರೀತಿಯ ತೊಂದರೆ ಇಲ್ಲವೇ ?

ಈ) ಶೇಂದಿ ಅಂಗಡಿಗಳ ಹರಾಜನ್ನು ರದ್ದು ಪಡಿಸಿ ಮೂರ್ತೆದಾರರು ಹಳಸಿದಂತಹ ಶೇಂದಿಯನ್ನು ಸದ್ರಿಯವರೇ ಮುಕ್ತ ಮಾರಾಟ ಮಾಡಲು ಅವಕಾಶ ಕಲ್ಪಿಸಿ ಸದ್ರಿಯವರ ಜೀತ ಪದ್ಧತಿಯನ್ನು ರದ್ದುಗೊಳಿಸುವಂತೆ ಸರಕಾರವು ಯಾವಾಗ ಅವರಿಗೆ ಅವಕಾಶ ಕಲ್ಪಿಸಿ ಕೊಡುತ್ತದೆ ?

ಶ್ರೀ ಜೆ. ಹೆಚ್. ಪಟೇಲ್ (ಮಾನ್ಯ ಅಬಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಶೇಂದಿಯನ್ನು ಮಾರಾಟ ಮಾಡುವ ಹಕ್ಕನ್ನು ಸಂಕಾರವು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡುವುದು. ಸದರಿ ಹರಾಜಿನಲ್ಲಿ ಭಾಗವಹಿಸಿ ಪಡೆದುಕೊಂಡ ಹಕ್ಕುದಾರನೇ ಶೇಂದಿ ಮಾರಾಟ ಮಾಡಬೇಕು. ಮೂರ್ತೆ ಮಾಡಲು ಬಿಲ್ಲವ ಜನಾಂಗದವರು ಶೇಂದಿ ಮಾರಾಟ ಮಾಡುವ ಹಕ್ಕನ್ನು ಪಡೆಯದೆ ಶೇಂದಿಯನ್ನು ಮುಕ್ತವಾಗಿ ಮಾರಾಟ ಮಾಡುವ ಹಕ್ಕಿಲ್ಲ.

ಆ) ಮೂರ್ತೆದಾರರು ಬಹಿರಂಗ ಹರಾಜಿನಲ್ಲಿ ಶೇಂದಿ ಮಾರಾಟ ಮಾಡಲು ಹಕ್ಕನ್ನು ಪಡೆದ ಗುತ್ತಿಗೆದಾರರಿಗೆ ಮೂರ್ತೆದಾರರೇ ನಿಗದಿ ಪಡಿಸಿದ ಬೆಲೆಗೆ ಮಾರಬೇಕು.

ಇ) ದಕ್ಷಿಣ ಕನ್ನಡ ಜಿಲ್ಲೆಯ ಹೊರತು ಈ ರೀತಿಯ ಮೂರ್ತೆದಾರರ ಮತ್ತು ಗುತ್ತಿಗೆದಾರರ ಸಂಬಂಧ ಬೇರಾವ ಜಿಲ್ಲೆಯಲ್ಲಿ ಇರುವುದಿಲ್ಲ.

ಈ) ಈ ವಿಚಾರ ಸರಕಾದ ಪರಿಶೀಲನೆಯಲ್ಲಿ ಇಲ್ಲ.

ರಾಜ್ಯದಲ್ಲಿ ಅಬಕಾರಿ ಹರಾಜಿನ ಬಗ್ಗೆ

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—

೨೯೬. ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

ಅ) ಈ ವರ್ಷದ ಅಬಕಾರಿ ಹರಾಜಿನಲ್ಲಿ ಕೆಲವು ತಾಲ್ಲೂಕುಗಳು ಕಡಿಮೆ ಬಿಡ್ಡಿಗೆ ಹರಾಜು ಅಂಗಡಿಗಳು ಹರಾಜಾಗಿದ್ದರೂ ಆ ತಾಲ್ಲೂಕುಗಳನ್ನು ಮರುಹರಾಜು ಮಾಡದಿರಲು ಕಾರಣಗಳೇನು ;

ಆ) ರಾಜ್ಯದ ಎಲ್ಲಾ ಶರಾಬು ಅಂಗಡಿಗಳನ್ನು ಬಿಡಿ ಬಿಡಿಯಾಗಿ ಹರಾಜು ಮಾಡಬೇಕೆಂದು ಹೆಚ್ಚಿನ ಶಾಸಕರು ಒತ್ತಾಯ ಪಡಿಸಿದ್ದರೂ ಸರಕಾರದವರು ಈ ವಿಷಯ ಗಣನೆಗೆ ತೆಗೆದುಕೊಳ್ಳದಿರಲು ಕಾರಣಗಳೇನು ?

ತುಂಗಾಪ್ರವಾಹ ಸಂತ್ರಸ್ತರಿಗೆ ಭಾಗ್ಯಮಂದಿರ ನಿರ್ಮಾಣ

೩೦೪. ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ ಮಾನ್ಯ ಕಾನೂನು ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ನಗರದಲ್ಲಿ ಕಳೆದ ವರ್ಷ ತುಂಗಾ ಪ್ರವಾಹದಲ್ಲಿ ನಿರಾಶ್ರಿತರಾದ ಕುಟುಂಬಗಳಿಗೆ ಭಾಗ್ಯಮಂದಿರಗಳನ್ನು ಸರ್ಕಾರದವರು ನಿರ್ಮಾಣ ಮಾಡಿಸಿದ್ದಾರೆಯೆ ?

ಆ) ಈ ರೀತಿ ನಿರಾಶ್ರಿತರಾಗಿರುವ ಸಂತ್ರಸ್ಥ ಕುಟುಂಬಗಳ ಸಂಖ್ಯೆ ಎಷ್ಟು ? ನಿರ್ಮಾಣ ಮಾಡಲಾದ ಭಾಗ್ಯಮಂದಿರಗಳ ಸಂಖ್ಯೆ ಎಷ್ಟು ?

ಇ) ಎಲ್ಲಾ ನಿರಾಶ್ರಿತರಿಗೂ ವಸತಿ ಕಲ್ಪಿಸಲು ಸರ್ಕಾರದ ಕ್ರಮಗಳಾವುವು ?

ಈ) ಹೀಗೆ ಕಟ್ಟಿರುವ ಕೆಲವು ಮನೆಗಳು ಇತ್ತೀಚಿನ ಮಳೆಯಲ್ಲಿ ಕುಸಿದು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ವಸತಿ ಮಂತ್ರಿಗಳು)—

ಅ) ೧೯೮೩–೮೪ ಸಾಲಿನಲ್ಲಿ ಕಟ್ಟಿಸಲಾಗಿದೆ.

ಆ) ಈ ರೀತಿ ನಿರಾಶ್ರಿತರಾಗಿರುವ ಸಂತ್ರಸ್ಥ ಕುಟುಂಬಗಳ ಸಂಖ್ಯೆ ಒಟ್ಟು ೬೨೦ ಇದರಲ್ಲಿ ೪೧೩ ನಿರಾಶ್ರಿತ ಕುಟುಂಬಗಳಿಗೆ ಮನೆಗಳು ಮಂಜೂರಾತಿ ದೊರಕಿಸುತ್ತವೆ.

ಇ) ಈ ಬಗ್ಗೆ ಪರಿಶೀಲಿಸಲಾಗುವುದು.

ಈ) ೧೯೮೩–೮೪ ಆಗಸ್ಟ್ ತಿಂಗಳ ಎರಡನೇ ವಾರದಲ್ಲಿ ಹೆಚ್ಚಿನ ಮಳೆಯಿಂದ ಎರಡು ಮನೆಗಳಲ್ಲಿ ಒಂದಕ್ಕೆ ಗೋಡೆಯು ಹಾಳಾಗಿರುತ್ತದೆ. ಇನ್ನೊಂದಕ್ಕೆ ವರ್ಟಿಕಲ್ ಬಿರುಕು ಬಿಟ್ಟಿರುತ್ತದೆ. ಆಲ್ಲದೆ ಇದರ ಜೊತೆಗೆ ೧೩ ಮನೆಗಳ ನೆಲವು ಹಾಳಾಗಿರುತ್ತದೆ. ಇವುಗಳಿಲ್ಲವನ್ನು ಸರಿಪಡಿಸಲು ಏರ್ಪಾಡು ಮಾಡಲಾಗಿದೆ.

ಕುಷ್ಟಗಿ ತಾಲೂಕಿನ ಹಳ್ಳಿಗಳಲ್ಲಿ ಬೀದಿ ದೀಪಗಳನ್ನು ಒದಗಿಸುವ ಬಗ್ಗೆ

೨೬೧. ಶ್ರೀ ಹನುಮೇಗೌಡ ಶೇಖರಗೌಡ ಪಾಟೀಲ್ (ಕುಷ್ಟಗಿ).—ಮಾನ್ಯ ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕುಷ್ಟಗಿ ತಾಲೂಕಿನ ಅನೇಕ ಹಳ್ಳಿಗಳಲ್ಲಿ ಬೀದಿ ದೀಪಗಳು ಇಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಹಳ್ಳಿಗಳಿಗೆ ಬೀದಿ ದೀಪಗಳನ್ನು ಒದಗಿಸಲು ಇನ್ನು ಎಷ್ಟು ಅವಧಿ ಬೇಕಾಗಬಹುದೆ ?

ಶ್ರೀ ಜೆ. ಹೆಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).

ಅ) ಬಂದಿದೆ.

ಆ) ೧೯೮೩–೮೪ರಲ್ಲಿ ೨೧ ಗ್ರಾಮಗಳಿಗೆ ಬೀದಿ ದೀಪಗಳನ್ನು ಒದಗಿಸುವ ಯೋಜನೆ ಇದೆ. ಉಳಿದ ಗ್ರಾಮಗಳಿಗೆ ಮುಂದಿನ ಮೂರು ವರ್ಷಗಳಲ್ಲಿ ಬೀದಿ ದೀಪ ಒದಗಿಸುವ ಗುರಿ ಹೊಂದಲಾಗಿದೆ.

ಕಾರ್ಮಿಕ ಗೃಹನಿರ್ಮಾಣ ಸಂಸ್ಥೆಗಳಿಗೆ ಲೇಔಟ್ ಮಾಡಲು ಅನುಮತಿ

೨೭೪. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಈ ಕಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರಿ ನೌಕರರಿಗೆ, ರಾಜ್ಯ ಸರ್ಕಾರದ ನೌಕರರಿಗೆ ಮತ್ತು ಬೆಂಗಳೂರು ನಗರದ ಕಾರ್ಮಿಕರಿಗೆ ಸಂಬಂಧಪಟ್ಟ ಗೃಹ ನಿರ್ಮಾಣ ಸಹಕಾರಿ ಸಂಸ್ಥೆಗಳಿಗೆ ಲೇಔಟ್ ಮಾಡಲು ಅನುಮತಿ ಯನ್ನು ಬಿ.ಡಿ.ಎ. ಮತ್ತು ಸರ್ಕಾರ ನೀಡಿದೆಯೆ ?